INDIAN JOURNAL OF HISTORY AND ARCHAEOLOGY
ISSN (e):2582-225Xwww.ijha.in
Vol-7, Issue -2, March--April, 2025,
PageNo,47- 56
Peer -Reviewed, Refereed Journal

# ಶಾಕ್ಯಕುಲದ ಸಿದ್ಧಾರ್ಥ ಗೌತಮನ ರಾಜ್ಯ ಪರಿತ್ಯಾಗಕ್ಕಿರುವ ಚಾರಿತ್ರಿಕ ಕಾರಣಗಳು: ಒಂದು ಅವಲೋಕನ

ಡಾ.ಇಂದಿರಮ್ಮ.[1]

**ಅ**ಖಂಡ ಜಗತ್ತಿನಲ್ಲಿರುವ ಪ್ರತಿಯೊಂದು ನಾಗರಿಕತೆ ಮತ್ತು ರಾಷ್ಟ್ರವು ಕೂಡ ಅದರ ಸಂಸ್ಕೃತಿಗಳು, ಸಂಪ್ರದಾಯಗಳು, ನಂಬಿಕೆಗಳು, ಆಚರಣೆಗಳು ಆ ನೆಲದಲ್ಲಿನ ಬುದ್ಧಿವಂತಿಕೆಯ ಮೂಲಕವೇ ಹೆಚ್ಚು ರೂಪುಗೊಂಡಿರುತ್ತವೆ. ಹಾಗಾಗಿಯೇ ಈ ನೆಲೆ ಮತ್ತು ಹಿನ್ನೆಲೆಯಲ್ಲಿ ಭಾರತವೂ ಕೂಡ ತನ್ನ ವೈವಿಧ್ಯಮಯ ಸಾಂಸ್ಕೃತಿಕ ಪರಂಪರೆಗೆ ವಿಶ್ವದಾದ್ಯಂತ ಪ್ರಖ್ಯಾತಿಗಳಿಸಿರುತ್ತದೆ. ಹಾಗೆಯೇ ಇದು ಅದರ ನಿರ್ಮಾಣದಲ್ಲಿನ ಪರಿಸರದ ಘಟಕಗಳನ್ನು ಸಹ ಹೊಂದಿದೆ. ಕ್ರಿ.ಪೂ. 6ನೆಯ ಶತಮಾನದ ಸಂದರ್ಭದಲ್ಲಿ ಬೌದ್ಧಧಮ್ಮದ ಉಗಮವು ಭಾರತದ ಆಧ್ಯಾತ್ಮಿಕ ಮತ್ತು ತತ್ವಜ್ಞಾನದ ಚರಿತ್ರೆಯನ್ನು ಮಾತ್ರವಲ್ಲದ್ದೇ ಅದರಲ್ಲಿ ಬೌದ್ಧರ ಸಂಸ್ಕೃತಿಯನ್ನು ರೂಪಿಸಿದಂತಹ ಒಂದು ನುಡಿಗಟ್ಟಾಗಿರುತ್ತದೆ. ಅನಂತರ ಪ್ರಾಚೀನ ಗಣರಾಜ್ಯ ಮತ್ತು ಪ್ರಜಾಸತ್ತಾತ್ಮಕ ವ್ಯವಸ್ಥೆಯನ್ನು ಅಳವಡಿಸಿಕೊಂಡಿದ್ದ ಭಾರತದ ಅನೇಕ ಸ್ವತಂತ್ರ ಗಣರಾಜ್ಯಗಳಲ್ಲಿ ಶಾಕ್ಯರ ಕಪಿಲವಸ್ತುವೂ ಒಂದಾಗಿತ್ತು. ಈ ಪ್ರದೇಶವನ್ನು ಅಂದು ಶಾಕ್ಯ ಕುಲದ ಆಡಳಿತಗಾರ ಸುದ್ಧೋಧನನು ಆಳ್ವಿಕೆಯನ್ನು ನಡೆಸುತ್ತಿದ್ದನು. ಈತನ ಮಗನೇ ಸಿದ್ಧಾರ್ಥ ಗೌತಮ. ಈ ಸಿದ್ಧಾರ್ಥ ಗೌತಮನು ಸಂಪೂರ್ಣ ಪರಿತ್ಯಾಗದಿಂದ ಬೋಧಿ ಜ್ಞಾನವನ್ನು ಪಡೆದು ಮಹಾಗುರು ಬುದ್ಧರೇ ಆದವರು ಎಂಬುದನ್ನು ಚಾರಿತ್ರಿಕ ಅಂಶವಾಗಿದೆ.

ಜಗತ್ತಿನ ಚರಿತ್ರೆಯ ಪರಂಪರೆಯಲ್ಲಿ ಕ್ರಿ.ಪೂ. 6ನೆಯ ಶತಮಾನವು ಒಂದು ವಿಮೋಚನಾ ಧ್ವನಿಯ ಸಂಚಲನವನ್ನು ಮೂಡಿಸಿದಂತಹ ಕಾಲಘಟ್ಟವಾಗಿರುತ್ತದೆ. ಏಕೆಂದರೆ, ಈ ಕಾಲಸಂದರ್ಭವು ಹೊಸ ಹೊಸ ಚೈತನ್ಯದೊಂದಿಗೆ ಸಾಧನೆಯ ಶಿಖರ ಏರುವ ದಾರ್ಶನಿಕ ಬೋಧಿಸತ್ವರ ತತ್ತ್ವ ಬೋಧನೆಯನ್ನು ಭಾರತೀಯ ಸಂಸ್ಕೃತಿಯು ಪ್ರಖರವಾಗಿಯೇ ಕಲಿಸಿಕೊಡುತ್ತದೆ. ಭಾರತೀಯ

[1].ಸಹ ಪ್ರಾಧ್ಯಾಪಕರು,ಇತಿಹಾಸ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕೋಲಾರ.

ಸಂದರ್ಭದಲ್ಲಿ ಹತ್ತು ಹಲವು ರೀತಿಯಲ್ಲಿ ಸಮೃದ್ಧಿ ಭೂಗೋಳ, ಸಾಂಸ್ಕೃತಿಕ, ಸಾಹಿತ್ಯಿಕ, ಪ್ರಾಕೃತಿಕವಾಗಿ, ರಾಜಕೀಯವಾಗಿ, ಚಾರಿತ್ರಿಕವಾಗಿ ಸಮೃದ್ಧಿ ಒಂದೆಡೆಯಾದರೆ, ಮತ್ತೊಂದೆಡೆ ಧಾರ್ಮಿಕ ಹಾಗೂ ದಾರ್ಶನಿಕ ಸಮಾಜವನ್ನು ಬೆಸೆದ ತತ್ವ ದರ್ಶನಗಳು ಅನೇಕ ಅನೇಕ ಇರುತ್ತವೆ. ಅವುಗಳು ದೇಶವನ್ನು ಮತ್ತಷ್ಟೂ ಸಕಲ ರೀತಿಯಲ್ಲಿಯೂ ಕೂಡ ಸಮೃದ್ಧಗೊಳಿಸಿವೆ. ಪ್ರಧಾನವಾಗಿಯೇ ಭಾರತದಲ್ಲಿ ಹೆಚ್ಚಿನ ಬೌದ್ಧಿಕ ವಿಚಾರಗಳಿದ್ದು, ಅವುಗಳ ಸಾಹಿತ್ಯವನ್ನು ಸರಿಸುಮಾರು ಪ್ರಾಚೀನ ಕಾಲದಿಂದಲೂ ಬಹಳ ಶ್ರೀಮಂತವಾಗಿಸಿದ ಕೀರ್ತಿಯು ಈ ಭರತ ಭೂಮಿಗಿದೆ. ಆದ್ದರಿಂದಲೇ ಭಾರತೀಯ ಸಂಸ್ಕೃತಿಯ ಸುಗಂಧವೇ ಈ ದೇಶಕ್ಕೆ ದೇಶ – ವಿದೇಶಿಗಳಲ್ಲಿನ ಹಲವರನ್ನು ಆಕರ್ಷಿಸಿದೆ ಮತ್ತು ಕೆಲವರು ಭಾರತದಲ್ಲಿಯೇ ವಾಸವೂ ಕೂಡ ಇದ್ದರು ಎಂಬುದು ಚರಿತ್ರೆಯಲ್ಲಿ ಕೊಡಮಾಡಲಾಗಿದೆ. ಈ ನೆಲೆಯಲ್ಲಿಯೇ ಇಲ್ಲಿನ ತತ್ತ್ವದರ್ಶನಗಳನ್ನು ಅರಿಯುವಂತೆ ಮತ್ತು ಅವುಗಳನ್ನು ತಳಸ್ಪರ್ಶಿಯಾಗಿ ಮಥಿಸುವಂತೆ ಮಾಡಿರುತ್ತವೆ. ಬಹುಮುಖ್ಯವಾಗಿ ಭಾರತೀಯ ಬೌದ್ಧ ಪರಂಪರೆಯು ವೈಶಿಷ್ಟ್ಯಪೂರ್ಣವಾದ ಅಭಿವ್ಯಕ್ತಿಯನ್ನು ಪೂರ್ಣವಾಗಿ ಹೊರ ಹಾಕುವ ಸರ್ವಸ್ವಾತಂತ್ರ್ಯನ್ನು ಕೂಡ ಪ್ರತಿಯೊಬ್ಬ ವ್ಯಕ್ತಿಗಳಿಗೆ ನೀಡಿರುತ್ತದೆ. ಸತ್ಯಶೋಧನೆ ಮತ್ತು ಆಧ್ಯಾತ್ಮವನ್ನು ಅದೇ ರೀತಿಯಲ್ಲಿ ಬಹುವಿಶಾಲವಾದ ಅಂಶಗಳು ಕೂಡ ಇಲ್ಲಿನ ದಾರ್ಶನಿಕ ಪ್ರಪಂಚದ ಆಗುಹೋಗುಗಳಿಗೆ ಇಂದಿಗೂ ಸ್ಥೂಲವಾದಂತಹ ಉತ್ತರವನ್ನು ನೀಡಬಲ್ಲವು.

ಆರಂಭಿಕ ಬೌದ್ಧಧಮ್ಮದ ಪಂಥವಾಗಿರುವಂತಹ ಹೀನಯಾನದಿಂದ ಹಿಡಿದು 20ನೆಯ ಶತಮಾನದ ನವಯಾನದ ಧಮ್ಮದ ತತ್ತ್ವ ಪಯಣದ ತನಕವೂ ಬೌದ್ಧ ಪರಂಪರೆಯು ತಾತ್ವಿಕತೆಯು ಹಲವು ಏರಿಳಿತಗಳನ್ನು ಕಂಡಿದೆ. ಭಾರತದಲ್ಲಿ ಮತ್ತು ವಿಶ್ವಮಟ್ಟದಲ್ಲಿ ಜನ್ಮತಾಳಿರುವಂತಹ ಧರ್ಮಗಳಲ್ಲಿ ಆಧ್ಯಾತ್ಮಿಕ ಹಾಗೂ ಧಾರ್ಮಿಕ ನೆಲ ಮೂಲದಲ್ಲಿ ಚಿಂತಿಸುವ ಮತ್ತು ಅವುಗಳನ್ನು ಬೋಧಿಸುವುದರಲ್ಲಿ ಇಂದಿಗೂ ಉದಾತ್ತ ಸದ್ಗುಣ ಆದರ್ಶಗಳನ್ನು ಹೊತ್ತು ನಡೆಯುವುದರಲ್ಲಿ ಬೌದ್ಧಸಂಸ್ಕೃತಿಯ ಪರಂಪರೆಯು ಎಲ್ಲರಿಗೂ ಕೂಡ ಸ್ಫೂರ್ತಿಯ ಚಿಲುಮೆಯಾಗಿದೆ. ಇದು ಇಂದಿಗೂ ಜಗತ್ತಿಗೆ ಶಾಂತಿ, ಸತ್ಯ, ಅಹಿಂಸೆ, ಪ್ರೀತಿ, ಕರುಣೆ, ಮೈತ್ರಿ, ಸುವಿಚಾರ ಸಹಿತವಾದ ಆತ್ಮ ವಿಮರ್ಶೆಗೆ ಮುಕ್ತವಾದ ದಾರಿಯನ್ನು ಮಾಡಿಕೊಟ್ಟಿರುವ ಪ್ರಾಚೀನ ಮತ – ಪಂಥ ಪರಂಪರೆಗಳಲ್ಲಿ ಬೌದ್ಧಧಮ್ಮವೂ ಮೇರು ಪರ್ವತದಂತಿದೆ. ಭಾರತೀಯ ಸಂದರ್ಭದ ಉಪಖಂಡದ ಉದ್ದಕ್ಕೂ ಸ್ಫೂರ್ತಿಯಾದ ತತ್ತ್ವ ಹಾಗೂ ಆದರ್ಶಗಳ ಮೂಲಕ ಸರ್ವಜನಸಾಮಾನ್ಯರನ್ನೂ ಬೆಸೆದಿರುತ್ತದೆ. ಬೌದ್ಧಧಮ್ಮ ಮತ್ತು ಅದರ ತತ್ವಬೋಧನೆಗಳು ಎಂಬುದು ವಿಶ್ವಮಾನ್ಯ ಚರಿತ್ರೆಯಲ್ಲಿನ ಪುಟಗಳಲ್ಲಿ ಪ್ರತಿಧ್ವನಿಸುತ್ತವೆ.

ಭಾರತ ದೇಶದ ಪ್ರಗತಿ ಪಥದಲ್ಲಿ ಸಾಮಾಜಿಕ, ಧಾರ್ಮಿಕ, ರಾಜಕೀಯ ಸತ್ಪರ್ಥಕ್ಕೂ ಈ ಬೌದ್ಧ ಆದರ್ಶನೀಯ ತತ್ತ್ವಗಳ ಪ್ರಭೆದವಿದೆ. ಭಾರತ ದೇಶದಲ್ಲಿನ ಪ್ರತಿಯೊಬ್ಬ ವ್ಯಕ್ತಿಯ ಮೈಮನಗಳಲ್ಲಿ ಹೆಮ್ಮೆ

ಮೂಡಿಸುವ ದೇಶದ ಪ್ರತಿಷ್ಠಿತ ಲಾಂಛನಗಳ ಮೂಲ ರೂಪ ಮಹಾನ್ ಚಕ್ರವರ್ತಿ ಅಶೋಕ ಮಹಾರಾಜರಿಗೆ ಸ್ಫೂರ್ತಿಯಾದ ಶಾಂತಿಪಥದ ತತ್ತ್ವ ಬಿಂಬಗಳೇ ಎಂಬುದು ಉಲ್ಲೇಖನೀಯವಾಗಿದೆ. ಅಶೋಕ ಚಕ್ರವೂ ದೇಶದ ನಿರಂತರ ಪ್ರಗತಿಯನ್ನು ಬಿಂಬಿಸುತ್ತದೆ. ಹಾಗೆಯೇ ಸಹನೆ, ಸಹಿಷ್ಣುತೆ, ಶಾಂತಿ, ಜ್ಞಾನ, ಪರಹಿತ, ಪರೋಪಕಾರದಂತಹ ಉದಾತ್ತ ಸದ್ಗುಣ ದರ್ಶನಗಳ ಬೇಕು ಇದೇ ಶಾಖೆಯಲ್ಲಿ ಅನುಕರಣಿಸಿ ಬೆಳೆದಿದೆ.

ಸರಿಸುಮಾರು 5000 ವರ್ಷಕ್ಕಿಂತಲೂ ಹೆಚ್ಚಿನ ಚರಿತ್ರೆಯುಳ್ಳಂತಹ ಭಾರತವು ಇಂದಿಗೂ ಪ್ರಸಿದ್ಧಿಯನ್ನು ಪಡೆದಿದೆ. ಇದಕ್ಕೆ ಕಾರಣೀಭೂತ ಅನೇಕ ಸ್ಮಾರಕಗಳಿವೆ. ಅವುಗಳನ್ನು ಒಳಗೊಂಡ ಸ್ಥಳಗಳು ಪರಂಪರೆಯ ತಾಣಗಳೆನಿಸಿರುತ್ತದೆ. ಆದ್ದರಿಂದಲೇ ಭಾರತವು ಸಂಸ್ಕೃತಿ, ಕಲೆ, ಸಂಗೀತ, ವಾಸ್ತುಶಿಲ್ಪ, ತತ್ವಶಾಸ್ತ್ರ, ಆಧ್ಯಾತ್ಮದಂತಹ ನಿಧಿಗಳನ್ನು ಒಳಗೊಂಡ ಭಂಡಾರವಾಗಿದೆ. ಇದು ಹಿಂದಿನ ಕಾಲದಿಂದಲೂ ವಿಶ್ವದಾದ್ಯಂತ ಪ್ರವಾಸಿಗರು, ವಿದ್ವಾಂಸರು ಮತ್ತು ಇತಿಹಾಸ ಪ್ರಿಯರನ್ನು ಆಕರ್ಷಿಸುತ್ತಲೇ ಬಂದಿರುವ ತನ್ನದೇ ಆದಂತಹ ಪರಂಪರೆಯನ್ನು ಹೊಂದಿದೆ. ಸಂಸ್ಕೃತಿಯು ಒಂದು ನಿರ್ದಿಷ್ಟ ಜನರು ಅಥವಾ ಸಮಾಜದ ಕಲ್ಪನೆಗಳು, ಪದ್ಧತಿಗಳು ಮತ್ತು ಅದರ ಸಾಮಾಜಿಕ ನಡವಳಿಕೆಯನ್ನು ಬಹುಮುಖ್ಯ ಸೂಚಿಸುತ್ತದೆ. ಹಾಗೆಯೇ ಮತ್ತೊಂದೆಡೆ, ಪರಂಪರೆಯು ವರ್ತಮಾನಕ್ಕೆ ಅನುವಂಶಿಕವಾಗಿ ಪಡೆದಿರುವ ಮತ್ತು ಮುಂದಿನ ಭವಿಷ್ಯಗಳಿಗೆ ಸಂರಕ್ಷಿಸಲ್ಪಡುವ ಸಂಸ್ಕೃತಿಯ ಅಂಶಗಳನ್ನು ಸೂಚಿಸುತ್ತದೆ.

ಸಾಮಾನ್ಯವಾಗಿ ಇಂದು ಲಭ್ಯವಿರುವ ಸಂಪ್ರದಾಯ ಶರಣರು ಬರೆಯುವ ಬೌದ್ಧ ಸಾಹಿತ್ಯಗಳಲ್ಲಿ ಸಿದ್ಧಾರ್ಥನು ಅರಮನೆಯಿಂದ ಯಾರಿಗೂ ತಿಳಿಯದಂತೆ ಮಧ್ಯರಾತ್ರಿಯಲ್ಲಿ ಹೊರಟು ಹೋದನೆಂದು ಬರೆಯಲಾಗಿದೆ. ಜಗತ್ತಿನಾದ್ಯಂತ ಹಾಗೆಯೇ ಪ್ರಚಾರವಾಗಿದೆ. ಆದರೆ ವಿಮರ್ಶಾತ್ಮಕವಾಗಿ ಇತಿಹಾಸಕಾರರು, ಪ್ರಗತಿಪರ ಚಿಂತಕರು ಈ ವಿಷಯವನ್ನು ಒಪ್ಪದೇ ಬೌದ್ಧಧಮ್ಮವನ್ನು ವ್ಯಾಪಕವಾಗಿಯೂ, ಆಳವಾಗಿಯೂ ಅಭ್ಯಾಸ ಮಾಡಿದಾಗ; ಸತ್ಯ ವಿಚಾರವು ಬೇರೊಂದು ಇದೆ ಎಂದು ಕಂಡುಬಂದಿದೆ. ಈ ಸತ್ಯವನ್ನು ಕಂಡುಹಿಡಿದ ವಿಮರ್ಶಕರಲ್ಲಿ ವಿಶ್ವಜ್ಞಾನಿಯಾಗಿರುವಂತಹ ಡಾ.ಬಾಬಾಸಾಹೇಬ್ ಅಂಬೇಡ್ಕರ್ ಅನಂತರದಲ್ಲಿ ದಾಮೋದರ ಧರ್ಮಾನಂದ ಕೋಸಂಬಿ ಅವರು ಪ್ರಮುಖರು ಎಂಬುದನ್ನು ಗುರುತಿಸಲಾಗಿದೆ. ಬುದ್ಧ ಗುರುವಿಗೆ ಸಂಬಂಧಿಸಿದ ಗ್ರಂಥಗಳಲ್ಲಿ ನಾಲ್ಕು ದೃಶ್ಯಗಳು ಉಲ್ಲೇಖವಾಗಿರುತ್ತವೆ. ಅವುಗಳೆಂದರೆ;

1. ವಯೋವೃದ್ಧ – ಹಿರಿಯ ವಯಸ್ಸಿನಿಂದಾಗಿ ಅವನ ಬೆನ್ನು ಬಾಗಿತ್ತು ಹಾಗೂ ಚರ್ಮವು ಸೊಕ್ಕು ಗಟ್ಟಿತ್ತು.
2. ಒಬ್ಬ ರೋಗಿ – ಭಯಾನಕ ರೋಗದಿಂದ ನರಳುತ್ತಿದ್ದ ವ್ಯಕ್ತಿ.
3. ಒಂದು ಶವಯಾತ್ರೆ – ದುಃಖತಪ್ತ ಅವನ ಸಂಬಂಧಿಗಳು ಅದನ್ನು ಸಂಸ್ಕಾರಕ್ಕಾಗಿ ಕೊಂಡೊಯ್ಯುತ್ತಿದ್ದರು.

4. ಒಬ್ಬ ಸನ್ಯಾಸಿ – ಸರ್ವಸಂಗ ಪರಿತ್ಯಾಗ ಮಾಡಿ ಲೋಕದ ದುಃಖಗಳನ್ನು ಶಮನಗೊಳಿಸುವುದಕ್ಕಾಗಿ ಚಿಂತಿಸುತ್ತಾ, ದೇಶ ಪರ್ಯಟನೆ ಮಾಡುತ್ತಿದ್ದ ಒಬ್ಬ ಪರಿವ್ರಾಜಕ ಸನ್ಯಾಸಿ.

ಈ ದೃಶ್ಯಗಳನ್ನು ನೋಡಿದ ಸಿದ್ಧಾರ್ಥ ಗೌತಮನು ಮನೆಯಿಂದಲೇ ಹೊರನಡೆದನು ಎಂದು ದಾಖಲಾಗಿದೆ. ಸಿದ್ಧಾರ್ಥ ಗೌತಮನು ಜನರಲ್ಲಿನ ದುಃಖಗಳನ್ನು ಹೋಗಲಾಡಿಸುವ ಮಾರ್ಗವನ್ನು ಕಂಡುಹಿಡಿಯುವುದಕ್ಕಾಗಿ ಅರಮನೆಯನ್ನು ಮಧ್ಯರಾತ್ರಿಯಲ್ಲಿ ಯಾರಿಗೂ ತಿಳಿಯದಂತೆ ತ್ಯಜಿಸುತ್ತಾನೆ ಎಂದು ಹಲವು ಹತ್ತು ಧರ್ಮ ಗ್ರಂಥಗಳಲ್ಲಿ ಮತ್ತು ಚರಿತ್ರೆಯಲ್ಲಿ ಬರೆದು ದಾಖಲೀಕರಿಸಲಾಗಿದೆ. ಈ ದೃಶ್ಯಗಳು ಸ್ವಲ್ಪಮಟ್ಟಿಗೆ ಬುದ್ಧ ಗುರುವಿನ ಮೇಲೆ ಪ್ರಭಾವ ಬೀರಿರಬಹುದು. ಆದರೆ, ಜ್ಞಾನೋದಯವನ್ನು ಪಡೆದು ಮಹಾಗುರು ಬುದ್ಧರು ಬೌದ್ಧಧಮ್ಮದಲ್ಲಿ ತನ್ನ ಭಿಕ್ಷು ವೃಂದಕ್ಕೆ ಕೆಲವು ಸಂದರ್ಭಗಳಲ್ಲಿ ತಾನೇಕೆ ಅರಮನೆಯನ್ನು ಬಿಟ್ಟು ಬಂದೆ ಎಂಬುದರ ವಿಚಾರವಾಗಿ ಪ್ರವಚನ ಮಾಡುವುದರ ಮೂಲಕ ತನಲ್ಲಿನ ಸತ್ಯದ ವಿಚಾರಗಳನ್ನು ಹೊರಗೆಡಹಲ್ಪಟ್ಟಿವೆ. ಆಗಿನ ಕಾಲದಲ್ಲಿನ ಸಮಾಜದಲ್ಲಿ ಪ್ರಚಲಿತವಾಗಿದ್ದ ಅನ್ಯಾಯಗಳನ್ನು ಹೀಗೆ ಉಲ್ಲೇಖಿಸಬಹುದು. ಮನುಷ್ಯನು ದುರಾಸೆಯಿಂದಾಗಿ ಆಗೀನ ಕಾಲದಲ್ಲಿ ದೊಡ್ಡ ರಾಜರುಗಳು ಗಣ ವ್ಯವಸ್ಥೆಯನ್ನು ಕಾಪಾಡಿಕೊಂಡು ಬರುತ್ತಿದ್ದ ಸಣ್ಣ ಪುಟ್ಟ ರಾಜ್ಯಗಳನ್ನು ಆಕ್ರಮಣ ಮಾಡುವುದು, ಆಗಲೇ ಬೇರೂರಿದ್ದ ವೈದಿಕ ಧರ್ಮದ ಅವೈಜ್ಞಾನಿಕ ಜಾತಿ ವ್ಯವಸ್ಥೆಯಿಂದಾಗಿ ಪುರೋಹಿತಶಾಹಿಯು ವ್ಯಾಪಕವಾದ ಶೂದ್ರರ ಶೋಷಣೆ, ಕೆಲವೇ ಜನರು ದುರಾಸೆಯಿಂದ ಅಪಾರವಾದ ಸಂಪತ್ತನ್ನು ಕೂಡಿ ಹಾಕುವುದು, ಬಡಜನರು ಎಷ್ಟು ಕಾಯಕದಲ್ಲಿ ತೊಡಗಿಸಿಕೊಂಡಿದ್ದರೂ ಹೊಟ್ಟೆಗೆ ಸಾಕಷ್ಟು ಇಲ್ಲದ ಪರಿಸ್ಥಿತಿಯು ನಿರ್ಮಾಣಗೊಂಡಿರುವುದು. ಕ್ರೌರ್ಯ, ಹಿಂಸೆ, ಮೋಸ, ವಂಚನೆ ಇದನ್ನೆಲ್ಲಾ ಸ್ವತಃ ಗ್ರಹಿಸಿದ ಸಿದ್ಧಾರ್ಥ ಗೌತಮನು ಈ ಜಗತ್ತು ಕಂಡ ಅತ್ಯಂತ ಸೂಕ್ಷ್ಮ ಸಂವೇದನಾಶೀಲ, ಭಾವನಾವಾದಿಯಾಗಿ ನೊಂದುಕೊಂಡವರು. ಹೀಗೆ, ನೊಂದುಕೊಂಡಿರುವುದು ನಿಜವಾಗಿರಬಹುದು. ಆದರೆ ಇಷ್ಟರಿಂದಲೇ ಅರಮನೆಯನ್ನು ಸಂಪೂರ್ಣವಾಗಿ ತ್ಯಜಿಸುವ ನಿರ್ಧಾರಕ್ಕೆ ಬಂದಿರುವುದಿಲ್ಲ. ಅರಮನೆಯನ್ನು ತ್ಯಜಿಸುವ ಒಂದು ಘಟನೆ ನಡೆದುದು ಹೀಗೆ ಎಂಬ ವಿಚಾರ ಬೌದ್ಧಧಮ್ಮದಲ್ಲಿ ಮಹಾಗುರು ಬುದ್ಧರ ಪ್ರವಚನಗಳನ್ನು ಅಧ್ಯಯನ ಮಾಡಿದಾಗ; ಬಹುಮುಖ್ಯವಾಗಿಯೇ ತಿಳಿದುಬರುತ್ತದೆ ಎಂದು ವಿಶ್ವಜ್ಞಾನದ ಸಂಕೇತವಾಗಿರುವಂತಹ ಡಾ.ಬಾಬಾಸಾಹೇಬ್ ಅಂಬೇಡ್ಕರ್ ಮತ್ತು ಡಿ.ಡಿ.ಕೋಸಂಬಿ ಅವರು ಈ ಕೆಳಗೆ ವಿವರಿಸುವ ಒಂದು ಮುಖ್ಯ ಘಟನೆಯನ್ನು ಉಲ್ಲೇಖಿಸುತ್ತಾರೆ.

ಶಾಕ್ಯ ಕುಲದ ರಾಜಧಾನಿಯಾಗಿದ್ದಂತಹ ಕಪಿಲವಸ್ತುವಿನಲ್ಲಿ ಸಿದ್ಧಾರ್ಥ ಗೌತಮನಿಗೆ ಕಟ್ಟಿಸಿಕೊಟ್ಟಿದ್ದ ಮೂರು ಅರಮನೆಗಳ ಪೈಕಿ ಒಂದರ ಎದುರಿನಲ್ಲಿಯೇ ರೋಹಿಣಿ ನದಿಯು ಹರಿಯುತ್ತದೆ.

ಈ ರೋಹಿಣಿ ನದಿಯ ನೀರು ಕಪಿಲವಸ್ತು ಮತ್ತು ನೆರೆಯ ಕೊಲಿಯರ ರಾಜ್ಯಗಳಿಗೆ ಹಂಚಿಕೆಯಾಗುತ್ತದೆ. ಇದು ಬಹುಕಾಲದಿಂದಲೂ ನಡೆದುಬಂದಿರುವ ಸಂಗತಿಯಾಗಿತ್ತು. ಹೀಗೆ ಒಂದು ಬೇಸಿಗೆಯಲ್ಲಿ ನದಿಯಲ್ಲಿ ನೀರಿನ ಅಭಾವ ಉಂಟಾಗುವುದರಿಂದ ನೀರಿನ ಹಂಚಿಕೆಯ ವಿಷಯದಲ್ಲಿ ಪ್ರತಿ ವರ್ಷವೂ ಈ ರಾಜ್ಯಗಳಿಗೆ ಸಂಘರ್ಷ ಹಾಗೂ ಘರ್ಷಣೆ ಉಂಟಾಗುತ್ತಿತ್ತು. ಇದನ್ನು ಪ್ರತ್ಯಕ್ಷದರ್ಶಿಯಾಗಿ ಸಿದ್ಧಾರ್ಥ ಗೌತಮನು ಬಹುಸೂಕ್ಷ್ಮವಾಗಿ ಗ್ರಹಿಸಿದನು. ಆ ಕಾಲದಸಂದರ್ಭದಲ್ಲಿಯೇ ಈ ಪರಿಸ್ಥಿತಿಯು ತುಂಬಾ ಉಲ್ಬಣಗೊಂಡಿರು. ಆ ಕಾರಣ ಮತ್ತು ಪರಿಣಾಮದಿಂದಾಗಿಯೇ ಕಪಿಲವಸ್ತು ಮತ್ತು ಕೊಲಿಯವರ ರಾಜ್ಯಗಳಿಗೆ ಯುದ್ಧ ಆಗುವ ಪರಿಸ್ಥಿತಿ ಉಂಟಾಗುತ್ತದೆ.

ಪ್ರಜಾಸತ್ತತೆಯ ಮಾದರಿ ಆಡಳಿತ ಗಣರಾಜ್ಯವಾಗಿರುವಂತಹ ಸಿದ್ಧಾರ್ಥ ಗೌತಮ ನಾಡು ಕಪಿಲವಸ್ತುವಿನಲ್ಲಿ ಇಂತಹ ವಿಷಯಗಳಲ್ಲಿ ನಿರ್ಣಯ ಕೈಗೊಳ್ಳಲು ಶಾಕ್ಯ ಸಂಘವೆಂಬಂತಹ ಒಂದು ಉನ್ನತ ಶ್ರೇಣಿಯ ಸಂಸದೀಯ ಮಾದರಿಯ ಆಡಳಿತ ವ್ಯವಸ್ಥೆಯೊಂದು ಇತ್ತು. ಸಿದ್ಧಾರ್ಥ ಗೌತಮನು ಶಾಕ್ಯ ಸಂಘದ ಒಬ್ಬ ಸದಸ್ಯನಾಗಿ ಪ್ರವೇಶವನ್ನು ಕೂಡ ಪಡೆದಿದ್ದನು. ಶಾಕ್ಯ ಸಂಘದಲ್ಲಿ ಕೊಲಿಯವರೊಡನೆ ಯುದ್ಧ ಮಾಡಬೇಕೇ ಬೇಡವೇ ಎಂಬುದು ಈ ಸಂಘದಲ್ಲಿ ನಿರ್ಣಯವಾಗಬೇಕು. ಆ ನಿರ್ಣಯವನ್ನು ಸರ್ವರ ಸಮ್ಮುಖದಲ್ಲಿ ಮತಕ್ಕೆ ಹಾಕಿದಾಗ ಸಿದ್ಧಾರ್ಥ ಗೌತಮನು ಯುದ್ಧದ ವಿರುದ್ಧವಾಗಿ ಮತ ಹಾಕುತ್ತಾನೆ. ಸಂಘದ ನಿಯಮದಂತೆ ಈ ಸಿದ್ಧಾರ್ಥ ಗೌತಮನ ನಿರ್ಣಯವು ದೇಶದ್ರೋಹವಾಗುತ್ತದೆ. ಅದಕ್ಕೆ ಶಿಕ್ಷೆಯ ದೇಶ ಭ್ರಷ್ಟನನ್ನಾಗಿ ಮಾಡುವುದು, ಅರಮನೆಯಲ್ಲಿನ ಸಂಪೂರ್ಣ ಆಸ್ತಿಯನ್ನು ಮುಟ್ಟುಗೋಲು ಅಥವಾ ಶಿಕ್ಷೆ. ಸಿದ್ಧಾರ್ಥ ಗೌತಮನು ಇವುಗಳಲ್ಲಿ ಮೊದಲನೆಯದನ್ನು ಆಯ್ಕೆ ಮಾಡಿಕೊಂಡಿರುತ್ತಾನೆ ಎಂಬುದು ಜಗತ್ತಿಗೆ ತಿಳಿದಿರುವ ಜಾಗತಿಕ ಸತ್ಯದ ವಿಚಾರವಾಗಿರುತ್ತದೆ. ಹುಟ್ಟಿನಿಂದಲೇ ಸಿದ್ಧಾರ್ಥ ಗೌತಮನು ಅಹಿಂಸಾವಾದಿಯು, ಕರುಣಾಮಯಿಯೂ ಆಗಿರುವ ಕಾರಣವಾಗಿಯೇ ಸಂಘದ ನಿರ್ಣಯಕ್ಕೆ ಒಪ್ಪುವುದಿಲ್ಲವೆಂಬುದು ಪುರೋಹಿತಶಾಹಿ ಆಡಳಿತಗಾರರಿಗೆ ಈ ಮೊದಲೇ ಅರಿವಿತ್ತು. ಏಕೆಂದರೆ, ಈ ಎರಡೂ ರಾಜ್ಯಗಳಲ್ಲಿ ಕಪಿಲವಸ್ತು ತನ್ನದೇ ರಾಜ್ಯ, ತಂದೆ ಶುದ್ಧೋಧನ ಅದಕ್ಕೆ ಮುಖ್ಯಸ್ಥರಾಗಿದ್ದನು. ಕೊಲಿಯವರು ತನ್ನ ಮಹಾಮಾಯೆಯ ತವರು ರಾಜ್ಯವೇ ಆಗಿತ್ತು. ಹೀಗಾಗಿ ರೋಹಿಣಿ ನದಿ ನೀರಿನಲ್ಲಿರುವ ರಾಜಕಾರಣದಿಂದ ಉಂಟಾಗಿರುವ ಕ್ಷುಲ್ಲಕ ಕಾರಣಕ್ಕಾಗಿ ತಮ್ಮ ತಮ್ಮೊಳಗೆ ಯುದ್ಧವಾಗಲೂ ಸಿದ್ಧಾರ್ಥ ಗೌತಮನು ಸಮ್ಮತಿಸಿರುವುದಿಲ್ಲ ಎಂಬುದು ಎಲ್ಲರಿಗೂ ಸ್ಪಷ್ಟವಾಗಿ ತಿಳಿದುಬಂದಿರುವಂತಹ ವಿಚಾರವಾಗಿರುತ್ತದೆ. ಈ ಪಿತೂರಿಯ ಉದ್ದೇಶ ಏನೆಂದರೆ; ಆಡಳಿತದಲ್ಲಿ ತಮ್ಮ ಪಟ್ಟಭದ್ರ ಹಿತಾಸಕ್ತಿಯ ಸಾಧನೆಗೆ ಸಿದ್ಧಾರ್ಥ ಗೌತಮನು ಯಾವಾಗಲೂ ಒಂದು ದೊಡ್ಡ ಅಡೆತಡೆಯೇ ಆಗಿದ್ದನು ಎಂಬುದು ವೈದಿಕರು ಅಪವಾದವಾಗಿತ್ತು. ಹೇಗಾದರೂ ಮಾಡಿ ಈ ಸಿದ್ಧಾರ್ಥ ಗೌತಮನನ್ನು ಕಪಿಲವಸ್ತುವಿನ ಆಡಳಿತದಿಂದಲೇ ಹೊರಗಿಡಬೇಕೆಂದು ಪುರೋಹಿತಶಾಹಿ ವರ್ಗ

ಆಲೋಚಿಸುತ್ತಿತ್ತು. ಆವಾಗ ಅವರಿಗೆ ಒಂದು ಒಳ್ಳೆಯ ಅವಕಾಶವೇ ಸಿಕ್ಕಿತು. ಅದುವೇ ಮೇಲೆ ದಾಖಲಿಸಿರುವ ನಿರ್ಣಯದ ಸೂಕ್ಷ್ಮತೆಯನ್ನು ಅರಿತಂತಹ ಸಿದ್ಧಾರ್ಥ ಗೌತಮನು ತನ್ನನ್ನು ರಾಜ್ಯಭ್ರಷ್ಟನನ್ನಾಗಿ ಮಾಡುವ ಮೊದಲು ತಾನೇ ರಾಜ್ಯದಿಂದ ಹೊರ ನಡೆಯುವುದಾಗಿ ತೀರ್ಮಾನಿಸುತ್ತಾನೆ. ಇದು ಮಾತ್ರವಲ್ಲದೇ ಕಪಿಲವಸ್ತು ಹಾಗೂ ಇಡೀ ನಾಡಿನಲ್ಲಿಯೇ ನಡೆಯುತ್ತಿದ್ದಂತ ಅನ್ಯಾಯ, ಅನೈತಿಕತೆ, ದುರಾಸೆ, ಅಕ್ರಮ, ಹಿಂಸೆ, ಕ್ರೂರತನಗಳಿಂದ ಕೂಡಿದ ಈ ದುರಾಸೆ, ಅಂಧಕಾರದಿಂದ ದುಃಖಮಯವಾಗಿರುವ ಸಮಾಜದ ಉದ್ಧಾರಕ್ಕೆ ಒಂದು ಮುಕ್ತವಾಗಿರುವ ದಾರಿಯೊಂದನ್ನು ಹುಡುಕಬೇಕೆಂದು ಅದಕ್ಕೆ ತಾನು ತಂದೆ, ತಾಯಿ, ಮಡದಿ ಹಾಗೂ ಮಗ ಇದರೊಟ್ಟಿಗೆ ಅರಮನೆಯನ್ನು ಸಂಪೂರ್ಣವಾಗಿ ತ್ಯಜಿಸಬೇಕೆಂದು ಸನ್ಯಾಸಿಯಾಗಿ ಧ್ಯಾನ ಹಾಗೂ ಕಠಿಣ ತಪಸ್ಸುಗಳಿಂದ ಒಂದು ಸೂಕ್ತ ಪರಿಹಾರವನ್ನು ಕಂಡುಹಿಡಿಯಬೇಕೆಂದೂ ತೀರ್ಮಾನಕ್ಕೆ ಬಂದಿರುವುದಾಗಿರುತ್ತದೆ. ಹಾಗೆಯೆ ಒಂದು ದಿನ ಅರಮನೆಯಲ್ಲಿರುವ ಎಲ್ಲರ ಎದುರಿನಲ್ಲಿಯೇ ತಂದೆ–ತಾಯಿಗಳಿಗೂ, ಮಡದಿ–ಮಗ, ಬಂಧು–ಬಳಗದವರಿಗೂ ಇರುವ ವಿಚಾರ ಹಾಗೂ ಸತ್ಯವನ್ನು ಹೇಳಿ ಅವರಿಂದ ಸಂಪೂರ್ಣ ಒಪ್ಪಿಗೆಯನ್ನು ಪಡೆದುಕೊಂಡನು.

ಮಹಾಗುರು ಈ ಸತ್ಯವನ್ನು ಬುದ್ಧರು ತನ್ನ ಶಿಷ್ಯರಿಗೆ ನೀಡಿರುವಂತಹ ಪ್ರವಚನ ಕಾಲದಲ್ಲಿ ಹೇಳಿದ ವಿಚಾರವು ಬೌದ್ಧಧಮ್ಮ ಗ್ರಂಥಗಳಲ್ಲಿ ಉಲ್ಲೇಖಿತಗೊಂಡಿದೆ. ಈ ಮೇಲಿನ ಘಟನೆಯು ವಿಚಾರವಾಗಿಯೇ ಬೌದ್ಧಧಮ್ಮದ ಗ್ರಂಥಗಳಲ್ಲಿ ಉಲ್ಲೇಖಿತವಾಗಿರುವಂತಹ ಗುರು ಬುದ್ಧರ ನೇರ ಮಾತಿನಿಂದ ತಾನೇಕೆ ಅರಮನೆಯನ್ನು ತ್ಯಜಿಸಿದನೆಂದು ಬೌದ್ಧ ಭಿಕ್ಷುಗಳ ಮುಂದೆ ತನ್ನ ಪ್ರವಚನದಲ್ಲಿ ಹೇಳಲಾಗಿದೆ. ಅದು ತ್ರಿಪಿಟಕಗಳಲ್ಲಿ ಬರುವಂತಹ ಅತ್ತದಂಡ ಸುತ್ತದಲ್ಲಿ ದಾಖಲೀಕರಿಸಲಾಗಿದೆ. ಬುದ್ಧಗುರು ಬೌದ್ಧ ಭಿಕ್ಷುಗಳನ್ನುದ್ದೇಶಿಸಿ ಈ ರೀತಿ ಹೇಳಿದ್ದಾರೆ; ಶಾಕ್ಯರು ಮತ್ತು ಕೊಲಿಯರು ಈ ಎರಡು ಕಡೆಯವರ ಯುದ್ಧ ಸಿದ್ಧತೆಯಲ್ಲಿ ಬಳಸುವಂತಹ ಶಸ್ತ್ರಾಧಾರಣವು ಭಯಾನಕವೆನಿಸಿತು. ಸೋದರ ಸಂಬಂಧಿಗಳೇ ಹೆಚ್ಚಿರುವ ಈ ರಾಜ್ಯಗಳಲ್ಲಿನ ಜನರು ಹೇಗೆ, ಜಗಳವಾಡುತ್ತಿದ್ದರು ಎಂದು ನೋಡಿ ನನ್ನಲ್ಲಿಗೆ ಹೇಗೆ ವೈರಾಗ್ಯ ಹುಟ್ಟಿತೆಂಬುದನ್ನು ಹೇಳುತ್ತೇನೆ. ಸ್ವಲ್ಪ ನೀರಿನಲ್ಲಿ ಮೀನುಗಳು ಒದ್ದಾಡುವಂತೆ ಪರಸ್ಪರರಲ್ಲಿ ವಿರೋಧ ಕಟ್ಟಿ ಒದ್ದಾಡುವ ಪ್ರಜೆಗಳನ್ನು ನೋಡಿ ನನ್ನ ಅಂತಃಕರಣದಲ್ಲಿ ಭಯ ಹೊಕ್ಕಿತು. ನಾಲ್ಕು ಕಡೆಗಳಿಂದ ಪ್ರಚಂಡ ಸಾರವೆಂದು ಕಂಡುಬಂದಿತು. ಎಲ್ಲಾ ದಿಕ್ಕುಗಳು ನಡುಗುತ್ತಿವೆ ಎನಿಸಿತು ಮತ್ತು ಆಶ್ರಯಕ್ಕಾಗಿ ಜಾಗವನ್ನು ಹುಡುಕುತ್ತಿದ್ದಾಗ ಎಲ್ಲಿಯೂ ನಿರ್ಭಯ ಸ್ಥಾನ ದೊರೆಯದಾಯಿತು. ಜನರು ತಮ್ಮೊಳಗೆ ವಿರೋಧಿಗಳಾದ್ದದ್ದನ್ನು ಕಂಡಂತಹ ನನಗೆ ಅತೀವ ದುಃಖವಾಯಿತು ಎಂದಿದ್ದಾರೆ. ಈ ಮೇಲಿನ ವಿವರಣೆಯು ಮಹಾಗುರು ಬುದ್ಧರಲ್ಲಿ ವೈರಾಗ್ಯ ಉಂಟಾದದ್ದು ಹೇಗೆ ಮತ್ತು ರಾಜ್ಯ ಮತ್ತು ತನ್ನ ಪರಿವಾರದಿಂದಲೇ ಏಕೆ ಹೊರಬಂದರು ಎನ್ನುವಂತಹ ತೆರೆದ ಸತ್ಯ ಸಂಗತಿ ದೊರಕುತ್ತದೆ.

**ಮಹಾಪರಿತ್ಯಾಗ** – ಸಿದ್ಧಾರ್ಥ ಗೌತಮನು ತನ್ನ ತಂದೆಯ ಬಳಿಗೆ ಹೋಗಿ ತಾನು ಸನ್ಯಾಸಿಯಾಗಲು ಅನುಮತಿಯನ್ನು ನೀಡಬೇಕು ಎಂದು ನಿವೇದಿಸಿಕೊಂಡಾಗ, ಅದನ್ನು ಸುದ್ಧೋಧನನು ಸಂಪೂರ್ಣವಾಗಿಯೇ ನಿರಾಕರಿಸುತ್ತಾನೆ. ಆವಾಗ ಸಿದ್ಧಾರ್ಥ ಗೌತಮನು ತನಗೆ ಬೇಕಾದಂತಹ ವಸ್ತುಗಳನ್ನು ಕೊಡಿಸುವುದಾದರೆ; ನಾನು ಸಂಸಾರ ತ್ಯಾಗ ಮಾಡುವುದಿಲ್ಲ ಎಂದು ಹೇಳಿ ತನ್ನ ಬೇಡಿಕೆಗಳನ್ನು ಇಡುತ್ತಾನೆ. ಆ ಬೇಡಿಕೆಗಳೆಂದರೆ;

1. ತನಗೆ ಎಂದೂ ಕೂಡ ವೃದ್ಧಾಪ್ಯ ಬಾರದಂತಿರಬೇಕು
2. ನಿತ್ಯವೂ ತಾನು ದುಃಖರಹಿತನಾಗಿರಬೇಕು
3. ತನಗೆ ಮರಣವೇ ಸಂಭಾವಿಸದೇ ಅಮರಜೀವಿಯಾಗಿರಬೇಕು.
4. ಯಾವ ಬಗೆಯಲ್ಲಿಯೂ ಕೂಡ ರೋಗ–ರುಜಿನಗಳು ತನ್ನನ್ನು ಎಂದೂ ಕೂಡ ಸ್ಪರ್ಶಿಸಬಾರದು.

ಇವುಗಳನ್ನು ತಂದೆಯು ಕರುಣಿಸುವುದಾದರೆ; ತಾನು ಎಂದೂ ಕಚ ಅರಣ್ಯ ಹಾಗೂ ವೈರಾಗ್ಯದ ಬದುಕಿಗೆ ಗಮನವನ್ನು ಬಯಸಿವೆ ಇಲ್ಲ ಎಂದು ಹೇಳಿದಾಗ; ಇದಕ್ಕೆ ರಾಜ ಶುದ್ಧೋನನಲ್ಲಿ ಉತ್ತರವಿಲ್ಲದೇ ಮೂಕ ಪ್ರೇಕ್ಷಕನಾಗಿದ್ದನು. ಆದ್ದರಿಂದಲೇ ಅಂತಿಮವಾಗಿ ಸಿದ್ಧಾರ್ಥ ಗೌತಮನು ಒಪ್ಪಿಗೆಯನ್ನು ಪಡೆದು ರಾಜ್ಯ ಮಹಾಪರಿತ್ಯಾಗಕ್ಕೆ ಸಿದ್ಧನಾಗಿದ್ದನು.

ಕಪಿಲವಸ್ತುವಿನ ರಾಜ ಪರಿವಾರದಲ್ಲಿ ಹುಟ್ಟಿ ಬೆಳೆದಿರುವ ಯುವರಾಜನಾಗಿದ್ದಂತಹ ಸಿದ್ಧಾರ್ಥ ಗೌತಮ ಎಲ್ಲರ ಪೂರ್ವಾನುಮತಿಯನ್ನು ಪಡೆದುಕೊಂಡೇ ತನ್ನ ಪ್ರೀತಿಯ ಅಶ್ವವಾದ ಕಂದಕ ಮತ್ತು ಸೇವಕ ಚೆನ್ನನೊಡನೆ ಕಪಿಲವಸ್ತುವಿನಲ್ಲಿಯೇ ಇದ್ದಂತಹ ಭಾರಧ್ವಾಜ ಎಂಬ ಮಹಾಋಷಿಗಳಿಂದ ಪರಿವ್ರಾಜಕ ದೀಕ್ಷೆಯನ್ನು ಪಡೆದುಕೊಂಡನು. ಹೀಗೆ ಭಾರಧ್ವಾಜ ಮುನಿಗಳಿಂದ ಪರಿವ್ರಾಜಕ ದೀಕ್ಷೆಯನ್ನು ಸಿದ್ಧಾರ್ಥ ಗೌತಮನು ಪಡೆದುಕೊಂಡನು ಎಂದು ಪ್ರಕಟಿಸಿದರು. ದೀಕ್ಷೆ ಮುಗಿದ ಅನಂತರ ಸಿದ್ಧಾರ್ಥ ಗೌತಮನು ಕೂಡಲೇ ಪಯಣ ಆರಂಭಿಸಿದನು. ದುಃಖದ ಭಾವಕ್ಕೆ ಕುಸಿದುಹೋಗುತ್ತಾರೆಂದು ಅವನು ತಿಳಿಸಿದ್ದನು. ಆದರೆ ಅವನಿಗೆ ತಿಇಯದಂತೆ ಅವರಿಬ್ಬರೂ ಈ ಮೊದಲೇ ಆಶ್ರಮಕ್ಕೆ ಬಂದಿದ್ದರು. ಮಗನನ್ನು ನೋಡಿದ ತಾಯಿಗಳು ಭಾವಪರವಶರಾಗಿ ಅವನನ್ನು ತಬ್ಬಿಕೊಂಡು ಕಣ್ಣೀರು ಸುರಿಸಿದರು. ವಚನದಂತೆ ಭಿಕ್ಷುನಾದ ಸಿದ್ಧಾರ್ಥ ಗೌತಮನು ಶಾಕ್ಯರ ಸಾಮ್ರಾಜ್ಯದಿಂದ ಹೊರನಡೆದನು. ರಾಜಕುಮಾರನು ಪರಿವ್ರಾಜಕನಾಗಿ ಆಶ್ರಮದಿಂದ ಹೊರಬಂದ ಕೂಡಲೇ ಜನಸಮೂಹ ಅವನನ್ನು ಹಿಂಬಾಲಿಸಿತು. ಆದರೂ ಕೂಡ ಸಿದ್ಧಾರ್ಥ ಗೌತಮನು ತನ್ನ ವಾಸಸ್ಥಾನವಾಗಿದ್ದಂತಹ ಕಪಿಲವಸ್ತುವನ್ನು ಬಿಟ್ಟು ಹೊರಟು ಅಲೋಮ ನದಿಯ ಕಡೆ ನಡೆದನು. ಈ ಜನಸ್ತೋಮ ಅವನನ್ನು ಹಿಂಬಾಲಿಸುತ್ತಲೇ ಇರುವುದನ್ನು ಗಮನಿಸಿದ ಈ ಸಿದ್ಧಾರ್ಥ ಗೌತಮನು ಅವರನ್ನು ಉದ್ದೇಶಿಸಿ; ಈ ರೀತಿ ಹೇಳಿದನು; "ಸಹೋದರ ಸಹೋದರಿಯರೇ ನೀವು ನನ್ನನ್ನು ಹಿಂಬಾಲಿಸುವುದರಿಂದ ಯಾವ ಪ್ರಯೋಜನವು ಇಲ್ಲ,

ಶಾಕ್ಯರು ಮತ್ತು ಕೊಲಿಯರ ನಡುವಿನ ಕಲಹವನ್ನು ಪರಿಹರಿಸುವಲ್ಲಿ ನಾನು ಸೋತಿದ್ದೇನೆ. ನೀವು ಇದರ ಶಾಂತಿಯುತ ಪರಿಹಾರಕ್ಕಾಗಿ ಭಿನ್ನಾಭಿಪ್ರಾಯವನ್ನು ಪಡೆಯುವುದಾದರೆ, ಬಹುಶಃ ಜಯವು ನಿಮ್ಮದೇ ಆಗುವುದು. ಆದ್ದುದರಿಂದ ದಯಮಾಡಿ ಹಿಂತಿರುಗಿ ಹೋಗಿ ಈ ಕಾರ್ಯವನ್ನು ಮಾಡಿರಿ" ಎಂದು ಮನವರಿಕೆಯ ಮಾತುಗಳನ್ನು ಆಡಿದನು. ಇವನ ಕರೆಯಿಂದ ಮನಸೋತ ಜನಸಮುದಾಯ ಕಪಿಲವಸ್ತುವಿನ ಕಡೆಗೆ ಹಿಂತಿರುಗಿತು. ಸುದ್ಧೋಧನ ಮತ್ತು ಪ್ರಜಾಪತಿ ಗೌತಮಿಯರೂ ಕೂಡ ಅರಮನೆಗೆ ವಾಪಸ್ಸಾದರು.

ಪರಿವ್ರಾಜಕನಾದಾಗ ಸಿದ್ಧಾರ್ಥ ಗೌತಮನಿಗೆ ಆವಾಗ ಸರಿಸುಮಾರು 29 ವರ್ಷವಾಗಿತ್ತು. ಎಲ್ಲಾ ಭೋಗ ಭಾಗ್ಯಗಳನ್ನು ಬಿಟ್ಟು ತನ್ನ ಕುಟುಂಬ ಮತ್ತು ಇಡೀ ಸಾಮ್ರಾಜ್ಯವನ್ನೇ ಬಿಟ್ಟು ನಡೆದ ಗೌತಮನ ತ್ಯಾಗವನ್ನು ನೋಡಿ ಜನ ಮೆಚ್ಚಿ ನಿಟ್ಟಿಸಿರುಬಿಟ್ಟರು. ಹೀಗೆ, ಸಿದ್ಧಾರ್ಥ ಗೌತಮನು ಅಹಿಂಸಾ ಹಾಗೂ ಶಾಂತಿ ಮಾರ್ಗಗಳನ್ನು ಬಿಡದೆ ಸ್ವ–ಇಚ್ಛೆಯಿಂದ ತನಗೆ ತಾನೇ ಶಿಕ್ಷೆ ವಿಧಿಸಿಕೊಂಡು ಶ್ರೀಮಂತಿಕೆಯನ್ನೆಲ್ಲಾ ತ್ಯಜಿಸಿ ಬಡತನವನ್ನು ಅಪ್ಪಿಕೊಂಡು ಅರಮನೆಯನ್ನು ತೊರೆದು ಅನಿಕೇತನನಾದನು. ತನ್ನವರು ತನ್ನದು ಎಂಬುದು ಯಾವುದೂ ಇಲ್ಲದೇ ಕೇವಲ ಏಕಾಂಗಿಯಾಗಿ ಬದುಕು ಸಾಗಿಸಿದನು. ಈ ಮಹಾತ್ಯಾಗ ಮಾಡಿದವರು. ಈ ಜಗತ್ತಿನಲ್ಲಿ ಸಿದ್ಧಾರ್ಥ ಗೌತಮನನ್ನು ಬಿಟ್ಟರೆ ಬೇರೆ ಯಾರು ಇರಲಾರರು ಎಂಬುದಾಗಿದೆ.

ಶಾಕ್ಯ ಕನ್ಯೆಯಾದ ಕಿಸಾಗೋತಮಿ ಸಿದ್ಧಾರ್ಥ ಗೌತಮನನ್ನು ಕುರಿತು ಹೇಳಿದ ಮಾತುಗಳು "ಇಂತಹ ಮಗನನ್ನು ಹೆತ್ತ ತಂದೆ–ತಾಯಿ ಪುಣ್ಯವಂತರು. ಇಂತಹ ಪತಿಯನ್ನು ಪಡೆದ ಸತಿಯೇ ನೀವು ಧನ್ಯರು" ಎಂದಿದ್ದಾಳೆ. ಇದು ಕೂಡ ಒಂದು ಮಾದರಿಯಲ್ಲಿ ಸಿದ್ಧಾರ್ಥ ಗೌತಮನ ವ್ಯಕ್ತಿತ್ವ ಹಾಗೂ ಹುಟ್ಟು ಸೌಮ್ಯ ಸ್ವಭಾವದ ಹಾಗೂ ಅಹಿಂಸಾವಾದಿಯಾಗಿ ಬೆಳೆದಿರುವುದೇ ಮತ್ತು ಸುಖಭೋಗವನ್ನು ಸಂಪೂರ್ಣ ತ್ಯಜಿಸಿ ಸನ್ಯಾಸಿ ಆಗಿರುವುದಾಗಿದೆ.

ಕಪಿಲವಸ್ತುವನ್ನು ಬಿಟ್ಟ ಸಿದ್ಧಾರ್ಥ ಗೌತಮನು ಮುಂದಿನ ಮಗಧ ರಾಜ್ಯದಲ್ಲಿನ ರಾಜಧಾನಿಯಾಗಿದ್ದಂತಹ ರಾಜಗೃಹಕ್ಕೆ ಹೋಗಲು ಯೋಚಿಸಿರುವುದು ಕಂಡುಬರುತ್ತದೆ. ಏಕೆಂದರೆ, ಮಗಧ ರಾಜ್ಯದಲ್ಲಿ ಬಿಂಬಿಸಾರ ಆಡಳಿತವನ್ನು ಮಾಡುತ್ತಿದ್ದ ಆ ಕಾಲದಲ್ಲಿ ಅತೀ ದೊಡ್ಡ ದೊಡ್ಡ ಘನದಾರ್ಶನಿಕರೂ, ಪ್ರಖ್ಯಾತ ಚಿಂತರ ಮಹಾಶಯರ ಕೇಂದ್ರಸ್ಥಾನವಾಗಿತ್ತು. ಆದ್ದರಿಂದಲೇ, ಅಲ್ಲಿ ಅನೇಕ ಪಂಡಿತರೊಡನೆ ತನ್ನ ಸತ್ಯಾನ್ವೇಷಣೆಯ ವಿಚಾರವನ್ನು ಕುರಿತು ಚರ್ಚಿಸಲು ಸಾಧ್ಯವಾಗಿರುತ್ತದೆ. ಮಗಧ ರಾಜ್ಯದ ರಾಜನಾಗಿದ್ದಂತಹ ಬಿಂದುಸಾರನು ಎಷ್ಟೇ ಚರ್ಚೆಗಳನ್ನು ಮಾಡಿದರೂ ಯಾವುದೇ ಪ್ರಯೋಜನವೇ ಆಗಲಿಲ್ಲ. ಆತನಿಗೂ ಕೂಡ ಉತ್ತರವನ್ನು ನೀಡಿ ಆತನು ಒಪ್ಪುವಂತೆ ಮಾಡಿದನು. ಸಿದ್ಧಾರ್ಥ ಗೌತಮನು ಎಂದು ಹೇಳಬಹುದು. ಮುಂದೆ ಇದೇ ರಾಜಗೃಹದಲ್ಲಿ ಒಂದು ಕುಟೀರವನ್ನು

ನಿರ್ಮಿಸಿಕೊಂಡು ಇರುವಾಗ, ಇವರ ಬಳಿಯೇ ಪರಿವ್ರಾಜಕವನ್ನು ಧರಿಸಿದ ಕೌಂಡಿನ್ಯ, ಅಶ್ವಜಿತ್, ಕಾಶ್ಯಪ, ಮಹಾನಾಮ ಮತ್ತು ಭಾದುಕ ಸಯಾಸಿಗಳಿದ್ದರು. ಆದರೂ ಕೂಡ ಅವರಿಂದ ಖಚಿತ ಉತ್ತರ ಸಿಗಲಿಲ್ಲದ ಕಾರಣ ಅನಂತರ ಸಿದ್ಧಾರ್ಥ ಗೌತಮನು ಗಂಗಾನದಿಯನ್ನು ದಾಟಿ ಶಾಖಿಯಾ, ಪದ್ಮ, ರೈವತ ಹೀಗೆ ಅನೇಕ ಬ್ರಾಹ್ಮಣ ಋಷಿಗಳನ್ನು ಹಾಗೂ ಸನ್ಯಾಸಿಗಳನ್ನು ಸಂಪರ್ಕಿಸಿ ಮುಂದೆ ಮುಂದೆ ಬಹುದೂರವೇ ಸಾಗಿದನು. ಈ ಹಾದಿಯಲ್ಲಿ ವೈಶಾಲಿ ನಗರದ 'ಅಲಾರ ಕಾಲಾಮ' ಗುರುವಿನ ಬಳಿ ತಮ್ಮ ಸಮಸ್ಯೆ ಮುಂದಿಟ್ಟರೂ, ಅವರಿಂದಲೂ ಕೂಡ ಸಿದ್ಧಾರ್ಥ ಗೌತಮನಿಗೆ ಸೂಕ್ತವಾದಂತಹ ಪರಿಹಾರ ಸಿಗಲಿಲ್ಲ. ಸತ್ಯಾನ್ವೇಷಣೆಯ ದಾಹವೂ ಮತ್ತಷ್ಟು ಹೆಚ್ಚಾಯಿತು.

ಸಿದ್ಧಾರ್ಥ ಗೌತಮನು ಸಾಧಿಸಿದ ಅತಿ ಸಂಯಮ ಮತ್ತು ಶರೀರದ ದಂಡನೆಯ ಈ ಮಾರ್ಗವು ಅತ್ಯಂತ ಕಠಿಣವಾಗಿತ್ತು. ಇದು ಸರಿಸುಮಾರು 6 ವರ್ಷಗಳ ಕಾಲ ದೇಹವನ್ನು ದಂಡಿಸುತ್ತಾ, ಕಠಿಣ ತಪಸ್ಸನ್ನು ಆಚರಿಸುತ್ತಾ ಕಾಲ ಕಳೆದನು. ಉರುವೇಲು ಗ್ರಾಮಕ್ಕೆ ಹೋಗಿ ಕಠಿಣ ತಪಸನ್ನು ಆಚರಿಸಿ ದೇಹವನ್ನು ದಂಡಿಸಿದನು. ಕೊನೆಗೊಮ್ಮೆ ನಿರಂಜನ ನದಿಯ ದಡಕ್ಕೆ ಹೋಗಿ ಸರ್ಪತೀರ್ಥಂಕ ಎಂಬ ಸ್ನಾನಘಟ್ಟದಲ್ಲಿ ಸ್ನಾನ ಮಾಡಿ ಉರುವೇಲು ಗ್ರಾಮದ ಶ್ರೀಮಂತ ವರ್ತಕನ ಮಗಳಾದ 'ಸುಜಾತ' ಕೊಟ್ಟ ಭಿಕ್ಷಾಟನವನ್ನು ಸ್ವಿಕರಿಸಿ ಗಯಾವನ್ನು ತಲುಪಿದನು. ಗಯಾದ ಅರಳಿ ವೃಕ್ಷದ ಕೆಳಗೆ ಧ್ಯಾನಸಕ್ತನಾಗಿ ಕುರಿತು ತನ್ನ ಚರ್ಮ, ನರಗಳು, ಮೂಲೆಗಳು ವ್ಯರ್ಥವಾದರೂ ಜ್ಞಾನೋದಯವಾಯಿತು. ಅಂದಿನಿಂದ ಸಿದ್ಧಾರ್ಥ ಗೌತಮನು ಬುದ್ಧನಾಗಿ ಜಗತ್ತಿನ ಮಹಾಬೆಳಕು ಹಾಗೂ ಮಹಾಗುರುವಾದರು. ಸತ್ಯವನ್ನು ಅರಿತ ತಥಾಗತನಾದನು. ತಥಾಗತ ಎಂದರೆ; ಜ್ಞಾನಿ, ಪ್ರಾಪಂಚಿಕ ಸುಖ ಭೋಗಗಳನ್ನು ಗೆದ್ದವನು. ಹೀಗೆ, ಮಹಾಗುರು ಬುದ್ಧರ ಅನುಯಾಯಿಗಳನ್ನು ಬೌದ್ಧರು ಎನ್ನುವರು ಅವರು ಜ್ಞಾನೋದಯ ಪಡೆದ ಗಯಾವನ್ನು ಇಂದಿಗೂ ಕೂಡ ಬುದ್ಧಗಯಾ ಅರಳಿವೃಕ್ಷ ಮಹಾಬೋಧಿ ವೃಕ್ಷ ಎಂದು ಕರೆಯಲಾಗುತ್ತದೆ. ಸಿದ್ಧಾರ್ಥ ಗೌತಮನು ಮನಸ್ಸಿನಲ್ಲಿ ಚಂಚಲವನ್ನು ಸಂಪೂರ್ಣವಾಗಿ ದೂರ ಮಾಡಿ ಜ್ಞಾನೋದಯವನ್ನು ಗಳಿಸುವ ಧ್ಯಾನಕ್ಕೆ ಕುರಿತು ನಾಲ್ಕು ಹಂತಗಳನ್ನು ದಾಟಿ ಬಂದನು. ಅದುವೇ;

1. ಬುದ್ಧಿ ಮತ್ತು ಪರೀಕ್ಷೆಯನ್ನು ಕುರಿತು ಅನುಸಂಧಾನ
2. ಮನಸ್ಸಿನ ಏಕಾಗ್ರತೆ
3. ಚಿತ್ತಶಾಂತಿ ಮತ್ತು ಸಾವಧಾನತೆಗಳು
4. ಚಿತ್ತಶಾಂತಿಗೆ ನಿರ್ಮಲತ್ವವನ್ನು ಸಾವಧಾನವಾಗಿ ಚಿತ್ತಸಾಕ್ಷ್ಯವನ್ನು ಮೈಗೂಡಿಸಿಕೊಳ್ಳುವುದಾಗಿರುತ್ತದೆ.

ಇವುಗಳಿಂದಲೇ ಸಿದ್ಧಾರ್ಥ ಗೌತಮನು ತನ್ನ ಮನಸ್ಸಿನಲ್ಲಿ ಏಕಾಗ್ರತೆ, ಪರಿಶುದ್ಧತೆ, ನಿರ್ಮಲತೆ, ಕಳಂಕರಹಿತತೆ, ಕುಶಲತೆ, ದಕ್ಷತೆ, ದೃಢತೆ, ಸ್ಥಿರ ಚಿತ್ತತೆಯನ್ನು ಗಳಿಸಿಕೊಂಡನು. ಅಂತಿಮವಾಗಿ ಬೆಳಕನ್ನು

ಕಂಡನು. ಆ ಬೆಳಕು ಬದುಕು ದುಃಖಮಯವಾದದ್ದು ದುಃಖವನ್ನು ಹೋಗಲಾಡಿಸುವುದು, ಇದರಿಂದ ಮನುಷ್ಯನನ್ನು ಸುಖಮಾರ್ಗದಲ್ಲಿ ನಡೆಸುವುದಾಗಿರುತ್ತದೆ. ಇದೇ ಅಂತಿಮವಾಗಿ ಜ್ಞಾನೋದಯ ಎಂದು ಕರೆಯಲಾಗಿರುತ್ತದೆ. ಹೀಗಾಗಿ, ಮಹಾಗುರು ಬುದ್ಧರ ಅನುಯಾಯಿಗಳನ್ನು ಬೌದ್ಧರು ಎನ್ನುವರು ಅವನು ಜ್ಞಾನೋದಯ ಪಡೆದ ಗಯಾವನ್ನು ಇಂದಿಗೂ ಕೂಡ ಅರಳಿವೃಕ್ಷ ಮಹಾಬೋಧಿ ವೃಕ್ಷವಾಯಿತೆಂದು ಕರೆಯಲಾಗುತ್ತದೆ.

## ಪರಾಮರ್ಶನ ಗ್ರಂಥಗಳು


1. ಡಾ.ಬಾಬಾಸಾಹೇಬ್ ಅಂಬೇಡ್ಕರ್ ಅವರ ಸಮಗ್ರ ಬರೆಹಗಳು ಮತ್ತು ಭಾಷಣಗಳು, ಸಂಪುಟ–03 ಮತ್ತು 10, 2015
2. ಸೂರ್ಯನಾಥ ಕಾಮತ್, ಕರ್ನಾಟಕದ ಸಂಕೀಪ್ತ ಇತಿಹಾಸ,ಬೆಂಗಳೂರು, 1998
3. ನಂದನ.ವೈ.ಬಿ, ಬುದ್ಧ ಚರಿತೆ ಮತ್ತು ಧಮ್ಮಸಾರ, 2000
4. ನಂದನ.ವೈ.ಬಿ: ಭಗವಾನ ಬುದ್ಧ, 2001
5. ಬಸವರಾಜ, ಎಲ್. ಬುದ್ಧ ಚರಿತೆ, 2002
6. ವಾಸುದೇವ ಮೂರ್ತಿ. ಟಿ.ಎನ್. (ಅನು), ಬುದ್ಧ ಮತ್ತು ಪರಂಪರೆ, 2015
7. ಮೂಡ್ನಾಕೂಡು ಚಿನ್ನಸ್ವಾಮಿ, (ಪ್ರ.ಸಂ), ಡಾ.ಜೆ.ಸೋಮಶೇಖರ್, (ವ್ಯ.ಸಂ), ಮರಳಿ ಮನೆಗೆ, 2006
8. ತಾಳ್ತಜೆ ವಸಂತಕುಮಾರ, ಬೌದ್ಧಾಯನ, 2005
9. ಶೆಟ್ಟಿ. ಸಿ.ಎನ್, ಗೌತಮ ಬುದ್ಧ ಬೌದ್ಧ ಧರ್ಮ, 1984
10. ಕನ್ನಡ ವಿಷಯ ವಿಶ್ವಕೋಶ, ಇತಿಹಾಸ ಮತ್ತು ಪುರಾತತ್ವ, ಮೈ.ವಿ.ವಿ.ಮೈಸೂರು 2009
11. ಕನ್ನಡ ವಿಷಯ ವಿಶ್ವಕೋಶ, ಮೈ.ವಿ.ವಿ.ಮೈಸೂರು,1989
12. ಕುಮಾರಯ್ಯಾ. ಡಿ.ಕೆ, ಬುದ್ಧ ಮತ್ತು ಧಮ್ಮ, 1984